ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಪರೀಕ್ಷೆ/ತಿ.ಪ.ಕೇ/2016–ಮಾ/2015–16.

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು–12
ದಿನಾಂಕ: 06-02-2016.

## ದರಪಟ್ಟಿ ಸಲ್ಲಿಸಲು ಪ್ರಕಟಣೆ

**ವಿಷಯ:** ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ನಡೆಸುವ ಕುರಿತು ಪರೀಕ್ಷಾ ಕೇಂದ್ರಗಳಿಗೆ ಸಂಬಂಧಪಟ್ಟ ಮನವಿ ಪತ್ರಗಳನ್ನು ಮುದ್ರಿಸಿ ಕೊಡುವ ಬಗ್ಗೆ.

* * * * *

2016ರ ಮಾರ್ಚ್ ತಿಂಗಳಿನಲ್ಲಿ ನಡೆಸಲಾಗುವ ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ಸುಸೂತ್ರವಾಗಿ ಮತ್ತು ಯಾವ ದುರಾಚರಣೆಗಳಿಲ್ಲದೆ ನಡೆಸಬೇಕೆಂಬ ದೃಷ್ಠಿಯಿಂದ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸುವ ಮನವಿ ಪತ್ರಗಳನ್ನು ಮುದ್ರಣ ಮಾಡಬೇಕಾಗಿದೆ. 3500 ಮನವಿ ಪತ್ರದ ಪ್ರತಿಗಳನ್ನು ಲಗತ್ತಿಸಿರುವ ಮಾದರಿಯಲ್ಲಿ ಮುದ್ರಿಸಿ ಕೊಡಲು ಅನುಭವವಿರುವ ಮತ್ತು ಸರ್ಕಾರಿ ಮುದ್ರಣ ಇಲಾಖೆಯಲ್ಲಿ ನೋಂದಣಿ ಅನುಮೋದಿಸಿಕೊಂಡಿರುವ ಮುದ್ರಕರಿಂದ ಮೊಹರಾದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

ದರಪಟ್ಟಿಗಳನ್ನು '**ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–12**. ಇವರ ವಿಳಾಸಕ್ಕೆ ದಿನಾಂಕ 15–02–2016 ಮಧ್ಯಾಹ್ನ 03:00 ಗಂಟೆಯೊಳಗಾಗಿ ಸಲ್ಲಿಸುವುದು. ಸ್ವೀಕೃತವಾದ ದರಪಟ್ಟಿಗಳನ್ನು ಅದೇ ದಿನ ಮದ್ಯಾಹ್ನ 03:30 ಗಂಟೆಗೆ ಹಾಜರಿರುವ ಟೆಂಡರ್‌ದ್ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

**ನಿಬಂಧನೆಗಳು:**

1. ಮೊಹರಾದ ದರಪಟ್ಟಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಮತ್ತು ಅಪೂರ್ಣವಾಗಿ ಸ್ವೀಕೃತವಾದ ದರಪಟ್ಟಿಗಳನ್ನು ಕಾರಣ ನೀಡದೆ ತಿರಸ್ಕರಿಸಲಾಗುವುದು.
2. ದರಪಟ್ಟಿಯನ್ನು ಒಪ್ಪುವ ಅಥವಾ ತಿರಸ್ಕರಿಸುವ ಮತ್ತು ಮುದ್ರಿಸ ಬೇಕಾದ ಪ್ರತಿಗಳ ಸಂಖ್ಯೆ ಕಡಿಮೆ ಮಾಡುವ ಹಕ್ಕು ನಿರ್ದೇಶಕರಿಗಿರುತ್ತದೆ.
3. ದರಪಟ್ಟಿಯನ್ನು ಒಪ್ಪಿ ಆದೇಶದ ದಿನದಿಂದ 05 ದಿನಗಳೊಳಗಾಗಿ ಮುದ್ರ ಕಾರ್ಯವನ್ನು ಮುಗಿಸಿ ಕೇಂದ್ರ ಕಛೇರಿಗೆ ಮನವಿ ಪತ್ರಗಳನ್ನು ಸರಬರಾಜು ಮಾಡಬೇಕು.
4. 100 ಜಿ.ಎಸ್.ಎಂ. ಕ್ರೋಮ್ ಆರ್ಟ್‌ಪೇಪರ್ ಉಪಯೋಗಿಸಿ 44 ಸೆ.ಮಿ. ಅಳತೆಯ ಮನವಿ ಪತ್ರಗಳನ್ನು ಮುದ್ರಿಸಬೇಕು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ:

1. ಇಲಾಖಾ ಸೂಚನಾಫಲಕ್ಕೆ.
2. ಸಹಾಯಕ ನಿರ್ದೇಶಕರು, (ಇ–ಆಡಳಿತ) (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು).
3. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ.
4. ಕಛೇರಿ ಪ್ರತಿ.